CCE-III-RR/PR/PF/NSR/NSPR(A)/111/7149

**A**

**ಆಗಸ್ಟ್ 2024 ರ ಪರೀಕ್ಷೆ-3**

**AUGUST 2024 EXAMINATION-3**

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 47 ]
Total No. of Questions : 47 ]

**ಸಂಕೇತ ಸಂಖ್ಯೆ : 95-K**
**Code No. : 95-K**

**CCE RR/PR/PF/ NSR/NSPR**
**FULL SYLLABUS**

Question Paper Serial No.

# ವಿಷಯ : ಸಮಾಜಶಾಸ್ತ್ರ

# Subject : SOCIOLOGY

**(ಕನ್ನಡ ಮಾಧ್ಯಮ / Kannada Medium)**

**(ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)**

**(Regular Repeater / Private Repeater / Private Fresh / NSR / NSPR)**

ದಿನಾಂಕ : 08. 08. 2024 ] [ Date : 08. 08. 2024

ಸಮಯ : ಬೆಳಗ್ಗೆ 10-15 ರಿಂದ ಮಧ್ಯಾಹ್ನ 1-30 ರವರೆಗೆ ] [ Time : 10-15 A.M. to 1-30 P.M.

ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

**Cut here/ಇಲ್ಲಿ ಕತ್ತರಿಸಿ**

1. ಈ ಪ್ರಶ್ನೆಪತ್ರಿಕೆಯು ಒಟ್ಟು 47 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ***ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ (ಬಾಣವನ್ನು ಅನುಸರಿಸಿ), ಎಡಬದಿ ಪಾರ್ಶ್ವವನ್ನು ಕತ್ತರಿಸಬೇಡಿ.*** ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.
6. ನಿಮಗೆ ವಿತರಿಸಲಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ( Version ) ಮತ್ತು ನಿಮ್ಮ ಪ್ರವೇಶ ಪತ್ರದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ಒಂದೇ ಆಗಿರುವುದನ್ನು ಖಾತರಿಪಡಿಸಿಕೊಳ್ಳಿ.

ಇಲ್ಲಿಂದ ಕತ್ತರಿಸಿ

**08. 08. 2024**

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

**Tear here**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ :**

**10 × 1 = 10**

1. ಸಾಮಾಜಿಕ ಬದಲಾವಣೆಯನ್ನು ತರುವ ಅತ್ಯಂತ ಪ್ರಭಾವಶಾಲಿ ಮಾಧ್ಯಮವು

(A) ದೂರವಾಣಿ

(B) ಶಿಕ್ಷಣ

(C) ರೇಡಿಯೋ

(D) ಸಮಾಜ

2. ರಷ್ಯಾದ ಜನರು ಇವರ ಸಿದ್ಧಾಂತದಿಂದ ಪ್ರಭಾವಿತರಾಗಿದ್ದರು

(A) ಸ್ಟಾಲಿನ್

(B) ಕಾರ್ಲ್ ಮಾರ್ಕ್ಸ್

(C) ರೂಸ್ಸೊ

(D) ಅಬ್ರಹಾಂ ಲಿಂಕನ್

3. ವಲಸೆಯ ಹೆಚ್ಚಳವು ಇದರ ಪರಿಣಾಮವಾಗಿದೆ

(A) ಜಾಗತೀಕರಣ

(B) ಖಾಸಗೀಕರಣ

(C) ಪ್ರಾದೇಶಿಕ ಅಸಮತೋಲನ

(D) ಉದಾರೀಕರಣ

4. 'ಕ್ಯಾಸ್ಟ್' ಎನ್ನುವ ಪದ ಪೋರ್ಚುಗೀಸ್ ಮತ್ತು ಸ್ಪಾನಿಷ್ ಭಾಷೆಯ ಈ ಪದದಿಂದ ಬಂದಿದೆ

(A) ಕ್ಯಾಸ್ಟಾ

(B) ಕ್ಯಾಸ್ಟ್

(C) ಕಮ್ಯೂನಿಟಿ

(D) ಕ್ರೀಡ್

5. 'ಹಿಂದೂ ಪುನರ್ ವಿವಾಹ ಕಾಯ್ದೆ' ಜಾರಿಗೆ ಬಂದ ವರ್ಷ

(A) 1856

(B) 1865

(C) 1956

(D) 1986

6. "ವೇದಗಳಿಗೆ ಹಿಂತಿರುಗಿ" ಎಂದು ಕರೆಯನ್ನು ಕೊಟ್ಟವರು

(A) ಸ್ವಾಮಿ ವಿವೇಕಾನಂದ

(B) ರಾಜಾ ರಾಮ್‌ಮೋಹನ್ ರಾಯ್

(C) ಜ್ಯೋತಿರಾವ್ ಫುಲೆ

(D) ಸ್ವಾಮಿ ದಯಾನಂದ ಸರಸ್ವತಿ

7. 'ಭಾರತ ರಾಷ್ಟ್ರೀಯ ಸೈನ್ಯ'ದ ಮಹಿಳಾ ಘಟಕದ ಮುಖ್ಯಸ್ಥರು

(A) ಪ್ರತಿಭಾ ಪಾಟೀಲ್

(B) ಮಾರ್ಗರೆಟ್ ಆಳ್ವಾ

(C) ಕರ್ನಲ್ ಲಕ್ಷ್ಮಿ

(D) ನಿವೇದಿತಾ

8. ಭಾರತದ ಪ್ರಥಮ ಮಹಿಳಾ ಪ್ರಧಾನ ಮಂತ್ರಿ

(A) ಮಾಯಾವತಿ

(B) ಉಮಾಭಾರತಿ

(C) ಜಯಲಲಿತಾ

(D) ಇಂದಿರಾ ಗಾಂಧಿ

9. ಈ ಕೆಳಗಿನವರಲ್ಲಿ ಯಾರು ಹೆಚ್ಚಿನ ಸಂಖ್ಯೆಯಲ್ಲಿ ಬುಡಕಟ್ಟು ಜನರಿರುವ ಪ್ರದೇಶವನ್ನು 'ಅನುಸೂಚಿತ ಪ್ರದೇಶ'ವೆಂದು ಘೋಷಿಸುವ ಅಧಿಕಾರ ಹೊಂದಿದ್ದಾರೆ ?

(A) ರಾಷ್ಟ್ರಪತಿಗಳು

(B) ಪ್ರಧಾನ ಮಂತ್ರಿಗಳು

(C) ಮುಖ್ಯಮಂತ್ರಿಗಳು

(D) ಉಪ ರಾಷ್ಟ್ರಪತಿಗಳು

10. ಭಾರತದ ಸಂವಿಧಾನದ ಈ ಕಲಂನ ಪ್ರಕಾರ ಆದಿವಾಸಿಗಳನ್ನು ಪರಿಶಿಷ್ಟ ಬುಡಕಟ್ಟುಗಳೆಂದು ಉಲ್ಲೇಖಿಸಲಾಗಿದೆ

(A) 244ನೇ ಕಲಂ

(B) 275ನೇ ಕಲಂ

(C) 332ನೇ ಕಲಂ

(D) 342ನೇ ಕಲಂ

**II.** 11. ***A*-ಪಟ್ಟಿಯನ್ನು *B*-ಪಟ್ಟಿಯೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :**

**5 × 1 = 5**

| ***A*-ಪಟ್ಟಿ** | ***B*-ಪಟ್ಟಿ** |
|---|---|
| (A) ರಾಜಾ ರಾಮ್‌ಮೋಹನ್ ರಾಯ್ | (i) ಖೇಡಾ ಸತ್ಯಾಗ್ರಹ |
| (B) ಆತ್ಮರಾಮ ಪಾಂಡುರಂಗ | (ii) ಬ್ರಹ್ಮ ಸಮಾಜ |
| (C) ಸರ್ದಾರ್ ಪಟೇಲ್ | (iii) ಆರ್ಯ ಸಮಾಜ |
| (D) ಮಹಾತ್ಮಾ ಗಾಂಧೀಜಿ | (iv) ಬಾರ್ಡೋಲಿ ಸತ್ಯಾಗ್ರಹ |
| (E) ಜ್ಯೋತಿರಾವ್ ಫುಲೆ | (v) ಪ್ರಾರ್ಥನಾ ಸಮಾಜ |
| | (vi) ಸತ್ಯಶೋಧಕ ಸಮಾಜ |
| | (vii) ರಾಮಕೃಷ್ಣ ಮಿಷನ್ |

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ಪದ / ವಾಕ್ಯದಲ್ಲಿ ಉತ್ತರ ಬರೆಯಿರಿ : 15 × 1 = 15**

12. ಸಾಮಾಜಿಕ ಬದಲಾವಣೆ ಎಂದರೇನು ?

13. ಕಿಂಗ್ಸ್‌ಲೇ ಡೇವಿಸ್‌ರ ಪ್ರಕಾರ ಸಾಮಾಜಿಕ ಬದಲಾವಣೆಯನ್ನು ವ್ಯಾಖ್ಯಾನಿಸಿ.

14. ಕೈಗಾರಿಕೀಕರಣ ಎಂದರೇನು ?

15. ಪ್ರಾದೇಶಿಕ ಅಸಮತೋಲನ ಎಂದರೇನು ?

16. ಬೌದ್ಧ ಧರ್ಮದ ಸ್ಥಾಪಕರು ಯಾರು ?

17. 'ಕ್ಯಾಸ್ಟ್ ಅಂಡ್ ರೇಸ್ ಇನ್ ಇಂಡಿಯಾ' ಎಂಬ ಪುಸ್ತಕವನ್ನು ಬರೆದವರು ಯಾರು ?

18. 'ಭಾರತದ ನವೋದಯದ ಪಿತಾಮಹ' ಎಂದು ಯಾರನ್ನು ಕರೆಯುತ್ತಾರೆ ?

19. 'ಆರ್ಯ ಸಮಾಜ'ದ ಸ್ಥಾಪಕರು ಯಾರು ?

20. ಬ್ರಿಟಿಷರ ವಿರುದ್ಧ ಹೋರಾಡಿದ ಕಿತ್ತೂರಿನ ರಾಣಿಯನ್ನು ಹೆಸರಿಸಿ.

21. ಹೋಂ ರೂಲ್ ಚಳವಳಿಯನ್ನು ಆರಂಭಿಸಿದವರು ಯಾರು ?

22. ಬುಡಕಟ್ಟು ಎಂದರೇನು ?

23. ಆದಿವಾಸಿಗಳನ್ನು 'ಗಿರಿಜನರು' ಎಂದು ಯಾರು ಕರೆದಿದ್ದಾರೆ ?

24. ಕೇಂದ್ರ ಸರ್ಕಾರವು ಯಾರ ಅಧ್ಯಕ್ಷತೆಯಲ್ಲಿ ಮೊದಲ ಬಾರಿಗೆ ಬುಡಕಟ್ಟು ಆಯೋಗವನ್ನು ರಚಿಸಿತು ?

25. 'ಕೇಸರಿ' ಪತ್ರಿಕೆಯನ್ನು ಪ್ರಕಟಿಸಿದವರು ಯಾರು ?

26. 'ಸಿಲಿಕಾನ್ ಸಿಟಿ' ಎಂದು ಪ್ರಸಿದ್ಧಿ ಪಡೆದಿರುವ ಕರ್ನಾಟಕದ ನಗರ ಯಾವುದು ?

**IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**14 × 2 = 28**

27. ಸಾಮಾಜಿಕ ಬದಲಾವಣೆಯ ಲಕ್ಷಣಗಳೇನು ?

28. ಜಗತ್ತನ್ನು ಕ್ಷಣಮಾತ್ರದಲ್ಲಿ ಸಂಪರ್ಕಿಸುವ ಪ್ರಮುಖ ಸಾಧನಗಳಾವುವು ?

29. ಸಾಮಾಜಿಕ ಬದಲಾವಣೆಗಿರುವ ಅಡ್ಡಿ ಆತಂಕಗಳು ಯಾವುವು ?

30. ಆರ್ಥಿಕ ಸಂಕಷ್ಟದಲ್ಲಿರುವವರು ಸಾಮಾಜಿಕ ಬದಲಾವಣೆಯನ್ನು ವಿರೋಧಿಸುತ್ತಾರೆ. ಏಕೆ ?

31. ಪಕ್ಕಾ ಆಹಾರ ಮತ್ತು ಕಚ್ಚಾ ಆಹಾರಗಳಿಗಿರುವ ವ್ಯತ್ಯಾಸವೇನು ?

32. ಜಾತಿ ಪದ್ಧತಿಯ ಗುಣಲಕ್ಷಣಗಳನ್ನು ತಿಳಿಸಿ.

33. ಸಾಮಾಜಿಕ ಚಳವಳಿಯ ಉದ್ದೇಶಗಳು ಯಾವುವು ?

34. ಭಾರತದ ಸ್ವಾತಂತ್ರ್ಯಾಂದೋಲನದಲ್ಲಿ ಭಾಗವಹಿಸಿದ ಯಾವುದಾದರೂ ನಾಲ್ಕು ಪ್ರಮುಖ ಮಹಿಳೆಯರನ್ನು ಹೆಸರಿಸಿ.

35. ಮಹಿಳೆಯರ ಆಸ್ತಿ ಹಾಗೂ ಉದ್ಯೋಗಕ್ಕೆ ಸಂಬಂಧಿಸಿದ ಕಾನೂನುಗಳನ್ನು ತಿಳಿಸಿ.

36. ಬ್ರಿಟಿಷರ ಕಾಲದಲ್ಲಿ ಮಹಿಳೆಯರ ಜಾಗೃತಿ ಮತ್ತು ಪ್ರಗತಿಗಾಗಿ ಹೋರಾಡಿದ ಮಹಿಳಾ ಸಂಘಟನೆಗಳಾವುವು ?

37. ಭಾರತದಲ್ಲಿ ಬುಡಕಟ್ಟುಗಳಿಗಿರುವ ವಿವಿಧ ಹೆಸರುಗಳು ಯಾವುವು ?

38. ಭಾರತ ಸರ್ಕಾರವು ಬುಡಕಟ್ಟುಗಳ ಅಭಿವೃದ್ಧಿಗೆ ರೂಪಿಸಿದ ನೀತಿಗಳನ್ನು ತಿಳಿಸಿ.

39. ಸಮೂಹ ಮಾಧ್ಯಮದ ಎರಡು ಪ್ರಕಾರಗಳು ಯಾವುವು ?

40. ಆಧುನಿಕ ಜೀವನದಲ್ಲಿ ಗಣಕಯಂತ್ರದ ಉಪಯೋಗಗಳಾವುವು ?

**V. ಈ ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**6 × 3 = 18**

41. ಸಾಮಾಜಿಕ ಬದಲಾವಣೆಯಲ್ಲಿ ಶಿಕ್ಷಣದ ಪಾತ್ರವೇನು ?

42. ಆರ್ಥಿಕ ಹಾಗೂ ಸಾಮಾಜಿಕ ಪ್ರಗತಿಯಲ್ಲಿ ನಗರ ಹಾಗೂ ಗ್ರಾಮೀಣ ಪ್ರದೇಶಗಳಿಗಿರುವ ಅಸಮಾನತೆಗಳನ್ನು ವಿವರಿಸಿ.

43. ಜಾತಿ ಪದ್ಧತಿಯಲ್ಲಿ ಬದಲಾವಣೆಗಳನ್ನು ತಂದಿರುವ ಅಂಶಗಳನ್ನು ಪಟ್ಟಿಮಾಡಿ.

44. ಭಾರತದಲ್ಲಿನ ಪ್ರತಿಭಟನಾತ್ಮಕ ಚಳವಳಿಗಳ ಸ್ವರೂಪವನ್ನು ವಿವರಿಸಿ.

45. ಮಹಿಳಾ ಸಬಲೀಕರಣದ ಪ್ರಾಮುಖ್ಯತೆಯನ್ನು ವಿವರಿಸಿ.

46. ಭಾರತದ ಬುಡಕಟ್ಟುಗಳಲ್ಲಿ ಸಂಭವಿಸುತ್ತಿರುವ ಸಾಮಾಜಿಕ ಬದಲಾವಣೆಗಳನ್ನು ವಿವರಿಸಿ.

**VI. ಈ ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :** **1 × 4 = 4**

47. ಪ್ರಚಲಿತ ಸಮಾಜದಲ್ಲಿ ಸಮೂಹ ಮಾಧ್ಯಮಗಳು ಪ್ರಮುಖ ಪಾತ್ರವಹಿಸುತ್ತವೆ. ಹೇಗೆ ?

DO NOT WRITE ANYTHING HERE